# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 111
ಸದಸ್ಯರ ಹೆಸರು : ಶ್ರೀ ನಿರಾಣಿ ಹಣವಂತ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 30.12.2022
ಉತ್ತರಿಸುವ ಸಚಿವರು : ಕೃಷಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರೈತ ವಿದ್ಯಾನಿಧಿ ಯೋಜನೆಯಡಿಯಲ್ಲಿ ಎಷ್ಟು ರೈತರ ಮಕ್ಕಳು ಸ್ಕಾಲರ್ ಶಿಪ್ ಪಡೆದುಕೊಂಡಿದ್ದಾರೆ: (ಸಂಪೂರ್ಣ ಮಾಹಿತಿ ನೀಡುವುದು) | ರೈತ ವಿದ್ಯಾನಿಧಿ ಯೋಜನೆಯಡಿ ದಿನಾಂಕ: 28.12.2022 ರವರೆಗೆ 2021-22ನೇ ಶೈಕ್ಷಣಿಕ ವರ್ಷದ 10,39,165 ವಿದ್ಯಾರ್ಥಿಗಳಿಗೆ ಹಾಗೂ 2022-23ನೇ ಶೈಕ್ಷಣಿಕ ವರ್ಷದ 11,43,88 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೇರ ನಗದು ವರ್ಗಾವಣೆ (Direct Benefit Transfer) ಮೂಲಕ ವರ್ಗಾಯಿಸಲು ಮಂಜೂರಾತಿಯನ್ನು ನೀಡಿದೆ.<br><br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಇದುವರೆಗೂ ಸ್ವೀಕೃತವಾದ ಅರ್ಜಿಗಳ ಪೈಕಿ ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ ಎಷ್ಟು: | ಇದುವರೆಗೂ ಸ್ವೀಕೃತವಾದ ಅರ್ಜಿಗಳ ಪೈಕಿ ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ- 3306 |
| ಇ) | ಯಾವ ಕಾರಣಕ್ಕಾಗಿ ಈ ಅರ್ಜಿಗಳು ತಿರಸ್ಕೃತಗೊಂಡಿವೆ: (ಸಂಪೂರ್ಣ ಮಾಹಿತಿ ನೀಡುವುದು) | • ಆಧಾರ್‌ನಲ್ಲಿರುವ ಹೆಸರು ಹಾಗೂ ಅರ್ಜಿಯಲ್ಲಿ ನಮೂಧಿಸಿರುವ ಹೆಸರು ಹೊಂದಾಣಿಕೆಯಾಗದೇ ಇರುವುದರಿಂದ<br>• ಆಧಾರ್ ಜೋಡಣೆಯಾದ ಬ್ಯಾಂಕ್ ಖಾತೆ ಹೊಂದಿಲ್ಲದಿರುವುದರಿಂದ<br>• FID ಯಲ್ಲಿ ಭೂಮಿ ವಿವರ ದಾಖಲು ಮಾಡದೇ ಇರುವುದರಿಂದ<br>• ವಿದ್ಯಾರ್ಥಿಯ ಕುಟುಂಬದ ಯಾವ ಸದಸ್ಯರೂ ಭೂಮಿ ಹೊಂದಿರುವ ರೈತರಾಗಿಲ್ಲದಿರುವುದರಿಂದ ಅರ್ಜಿಗಳು ತಿರಸ್ಕೃತಗೊಂಡಿವೆ. |

| | | |
|---|---|---|
| ಈ) | ಈ ಯೋಜನೆಗೆ ವರ್ಷಕ್ಕೆ ಒದಗಿಸಲಾಗಿರುವ ಮೊತ್ತ ಎಷ್ಟು ಹಾಗೂ ಸ್ಕಾಲರ್ ಶಿಫ್ ಪಡೆಯಲು ಅನುಸರಿಸಬೇಕಾಗಿರುವ ಮಾನದಂಡವೇನು ? | ಈ ಯೋಜನೆಗೆ 2022-23ನೇ ಸಾಲಿಗೆ ರೂ.1010.00 ಕೋಟಿ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ವಿದ್ಯಾರ್ಥಿ ವೇತನ ಪಡೆಯಲು ಅನುಸರಿಸಬೇಕಾಗಿರುವ ಮಾನದಂಡಗಳು:<br>• ರೈತ ಕುಟುಂಬದ ಎಲ್ಲಾ ಮಕ್ಕಳು 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿ ವೇತನ ಪಡೆಯಲು ಅರ್ಹರಿರುತ್ತಾರೆ. ಸದರಿ ಉದ್ದೇಶಕ್ಕೆ ರೈತ ಕುಟುಂಬ ಎಂದರೆ ರಾಜ್ಯದ ಇ-ಆಡಳಿತ ಇಲಾಖೆಯು ನಿರ್ವಹಿಸುತ್ತಿರುವ "ಕುಟುಂಬ" ತಂತ್ರಾಂಶದ ದತ್ತಾಂಶದಲ್ಲಿ ದಾಖಲಾಗಿರುವ ಸದಸ್ಯರು<br>• ವಿದ್ಯಾರ್ಥಿಯು ಇತರೆ ಯಾವುದೇ ವಿದ್ಯಾರ್ಥಿ ವೇತನ ಪಡೆಯುತ್ತಿದ್ದರೂ 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗುತ್ತಾರೆ<br>• 'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ವಿದ್ಯಾರ್ಥಿವೇತನವನ್ನು ವಿತರಿಸುವ ಉದ್ದೇಶಕ್ಕೆ ರಾಜ್ಯದ ವಿವಿಧ ಇಲಾಖೆಗಳು ನಿರ್ವಹಿಸುತ್ತಿರುವ ಶೈಕ್ಷಣಿಕ ಹಾಗೂ ಇತರೆ ದತ್ತಾಂಶದ ಆಧಾರದ ಮೇಲೆ ಅರ್ಹ ಫಲಾನುಭವಿಗಳನ್ನು ಗುರುತಿಸಿ (On entitlement basis) ವಿದ್ಯಾರ್ಥಿ ವೇತನವನ್ನು ವಿತರಿಸುವುದು ಹಾಗೂ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ, ಅಂತಹ ಪ್ರಕರಣಗಳನ್ನು ಸಹ ಪರಿಗಣಿಸಿ ಅರ್ಹರಿಗೆ ವಿದ್ಯಾರ್ಥಿ ವೇತನವನ್ನು ನೇರ ನಗದು ವರ್ಗಾವಣೆ (Direct Benefit Transfer) ಮೂಲಕ ವರ್ಗಾಯಿಸುವುದು<br>• ಸರ್ಕಾರದ ಆದೇಶ ಸಂಖ್ಯೆ:AGRI-AML/141/2021-22, ದಿ:30.08.2022 ರನ್ವಯ 2022-23ನೇ ಶೈಕ್ಷಣಿಕ ಸಾಲಿನಿಂದ ಭೂ ರಹಿತ ಕೃಷಿ ಕಾರ್ಮಿಕರ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಕಾರ್ಯಕ್ರಮವನ್ನು ಕೃಷಿ ಕಾರ್ಮಿಕರ ಮಕ್ಕಳಿಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿರುತ್ತದೆ.<br>• ಕಾರ್ಯಕ್ರಮದಡಿ ನೀಡಲಾಗುವ ವಿದ್ಯಾರ್ಥಿ ವೇತನದ ವಿವರ |

| ಕ್ರ. ಸಂ. | ಕೋರ್ಸ್‌ಗಳು | ವಿದ್ಯಾರ್ಥಿಗಳು | ವಿದ್ಯಾರ್ಥಿನಿಯರು |
|---|---|---|---|
| 1 | ಪ್ರೌಢಶಾಲಾಶಿಕ್ಷಣ | ——— | ರೂ.2000/- |
| 2 | ಪಿ.ಯು.ಸಿ / ಐ.ಟಿ.ಐ / ಡಿಪ್ಲೋಮಾ | ರೂ.2500/- | ರೂ.3000/- |
| 3 | ಬಿ.ಎ./ಬಿ.ಎಸ್.ಸಿ/ ಬಿ.ಕಾಂ ಇನ್ನಿತರೆ ಪದವಿ ಕೋರ್ಸ್‌ಗಳು | ರೂ.5000/- | ರೂ.5500/- |
| 4 | ಎಲ್.ಎಲ್.ಬಿ / ಪ್ಯಾರಾಮೆಡಿಕಲ್ / ಬಿ.ಫಾರ್ಮ್ / ನರ್ಸಿಂಗ್ ಇನ್ನಿತರೆ ವೃತ್ತಿಪರ ಕೋರ್ಸ್‌ಗಳು | ರೂ.7500/- | ರೂ.8000/- |
| 5 | ಎಂ.ಬಿ.ಬಿ.ಎಸ್ / ಬಿ.ಇ / ಬಿ.ಟೆಕ್ ಮತ್ತು ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳು | ರೂ.10000/- | ರೂ.11000/- |

**ಸಂಖ್ಯೆ:** AGRI-AML/287/2022

**(ಬಿ.ಸಿ. ಪಾಟೀಲ್)**
ಕೃಷಿ ಸಚಿವರು

## ಅನುಬಂಧ

## ಮುಖ್ಯಮಂತ್ರಿ ರೈತ ವಿದ್ಯಾನಿಧಿ ಕಾರ್ಯಕ್ರಮದ ಜಿಲ್ಲಾವಾರು ಪ್ರಗತಿ ವರದಿ (28.12.2022)

| ಕ್ರ.ಸಂ | ಜಿಲ್ಲೆ | ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 48756 |
| 2 | ಬಳ್ಳಾರಿ | 45776 |
| 3 | ಬೆಳಗಾವಿ | 99952 |
| 4 | ಬೆಂಗಳೂರು ಗ್ರಾ | 9891 |
| 5 | ಬೆಂಗಳೂರು ನಗರ | 59895 |
| 6 | ಬೀದರ್ | 28601 |
| 7 | ಚಾಮರಾಜನಗರ | 11182 |
| 8 | ಚಿಕ್ಕಬಳ್ಳಾಪುರ | 16922 |
| 9 | ಚಿಕ್ಕಮಗಳೂರು | 13632 |
| 10 | ಚಿತ್ರದುರ್ಗ | 27574 |
| 11 | ದಕ್ಷಿಣ ಕನ್ನಡ | 36847 |
| 12 | ದಾವಣಗೆರೆ | 30526 |
| 13 | ಧಾರವಾಡ | 37948 |
| 14 | ಗದಗ | 25209 |
| 15 | ಹಾಸನ | 35012 |
| 16 | ಹಾವೇರಿ | 29814 |
| 17 | ಕಲಬುರ್ಗಿ | 51823 |
| 18 | ಕೊಡಗು | 5562 |
| 19 | ಕೋಲಾರ | 17920 |
| 20 | ಕೊಪ್ಪಳ | 31913 |
| 21 | ಮಂಡ್ಯ | 34536 |
| 22 | ಮೈಸೂರು | 53149 |
| 23 | ರಾಯಚೂರು | 42946 |
| 24 | ರಾಮನಗರ | 12560 |
| 25 | ಶಿವಮೊಗ್ಗ | 31117 |
| 26 | ತುಮಕೂರು | 46011 |
| 27 | ಉಡುಪಿ | 26995 |
| 28 | ಉತ್ತರ ಕನ್ನಡ | 25596 |
| 29 | ವಿಜಯಪುರ | 49135 |
| 30 | ಯಾದಗಿರಿ | 24513 |
| 31 | ಜಿಲ್ಲಾವಾರು ವಿಂಗಡಣೆಗೆ ಬಾಕಿ | 1970 |
| **ಒಟ್ಟು** | | **1013283** |

**ಷರಾ: 2021-22 ನೇ ಶೈಕ್ಷಣಿಕ ಸಾಲಿನ ಉಳಿದ ವಿದ್ಯಾರ್ಥಿಗಳ ಹಾಗೂ 2022-23 ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಜಿಲ್ಲಾವಾರು ವಿಂಗಡಣೆ ಪ್ರಗತಿಯಲ್ಲಿರುತ್ತದೆ.**